3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. 1081/2025

ದಿನಾಂಕಃ 13.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಲಕ್ಕಮ್ಮ | ಚಾಸಾ-1, ಪ್ರಾಸ.-1 |
| ಗಂಡನ ಹೆಸರು ಃ | ಬಸವರಾಜ | |
| ವಯಸ್ಸು ಃ | 42 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ದೋಗಿಹಳ್ಳಿ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ವ್ಯಕ್ತಿ ನನ್ನ ಗಂಡ. ಚಾಸಾ-2 ರಿಂದ 5 ನನಗೆ ಗೊತ್ತು. ದಿಃ 05.12.2024 ರಂದು ಮೃತ ವ್ಯಕ್ತಿಯು ಬೆಳಗ್ಗೆ 7.00 ಗಂಟೆ ಸಮಯಕ್ಕೆ ಟಿ ವಿ ಎಸ್ ವಾಹನದಲ್ಲಿ ತೋಟದ ಕೆಲಸಕ್ಕೆ ಹೊರಟಿರುತ್ತಾರೆ. ಸುಮಾರು 7.30 ಗಂಟೆಗೆ ಚಾಸಾ-2 ರವರು ಕರೆ ಮಾಡಿ ನನ್ನ ಗಂಡನಿಗೆ ಹಳ್ಳಿ ಮೇಸ್ಟ್ರು ಅಡಿಕೆ ಗೋಡೌನ್ ಬಳಿ ಅಪಘಾತವಾಗಿರುವ ವಿಚಾರವನ್ನು ತಿಳಿಸಿದ್ದು, ತಕ್ಷಣ ನಾನು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಗಂಡನ ತಲೆ, ಕೈ ಮತ್ತು ಎದೆ ಭಾಗಕ್ಕೆ ತೀವ್ರ ಸ್ವರೂಪದ ಗಾಯವಾಗಿತ್ತು. ಚಾಸಾ-2 ರವರು ಅಂಬುಲೆನ್ಸ್‌ಗೆ ಕರೆ ಮಾಡಿ ನನ್ನ ಗಂಡನನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ಪರಿಶೀಲಿಸಿ ನನ್ನ ಗಂಡ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಅಪಘಾತದ ಬಗ್ಗೆ ಚಾಸಾ-2 ಮತ್ತು 3 ರವರಿಂದ ತಿಳಿಯಲಾಗಿ ನನ್ನ ಗಂಡ ಚಾಲನೆ ಮಾಡುತಿದ್ದ ಎಕ್ಸ್‌ಎಲ್ ವಾಹನಕ್ಕೆ ಮಹೇಂದ್ರ ಎಸ್ ಯು ವಿ ವಾಹನದ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಿಂದುಗಡೆಯಿಂದ ಡಿಕ್ಕಿಪಡಿಸಿರುತ್ತಾನೆ ಎಂದು ತಿಳಿಯಿತು. ನಂತರ ವಿಚಾರಿಸಲಾಗಿ ಮಹೇಂದ್ರ ವಾಹನದ ಚಾಲಕನ ಹೆಸರು ವಿನುತ್, ಚಿಕ್ಕಮಗಳೂರು ವಾಸಿ ಎಂದು ತಿಳಿದುಕೊಂಡಿರುತ್ತೇನೆ. ಆರೋಪಿ ಚಲಾಯಿಸುತ್ತಿದ್ದ ಕಾರಿನಲ್ಲಿ ಇದ್ದವರ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ಅದೇ ದಿನ ಬೀರೂರು ಪೋಲಿಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರಿಗೆ ಸಂಬಂಧಿಸಿದಂತೆ ಘಟನೆ ನಡೆದ 2-3 ದಿನಗಳ ನಂತರ ಘಟನಾ ಸ್ಥಳಕ್ಕೆ ಹೋಗಿದ್ದು, ಚಾಸಾ-4, 5 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ದಿಃ 09.02.2024 ರ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆಯಲಾದ 6 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ನಂತರ ಠಾಣೆಯಲ್ಲಿ ನಿಂತಿದ್ದ ಅಪಘಾತಪಡಿಸಿದ ಮತ್ತು ಅಪಘಾತಕ್ಕೊಳಗಾದ ವಾಹನಗಳನ್ನು ಮಧ್ಯಾಹ್ನ 2.00 ರಿಂದ 3.00 ರವರೆಗೆ ಚಾಸಾ-4, 5 ರವರ ಸಮಕ್ಷಮ

ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇಸಮಯದಲ್ಲಿ ತೆಗೆಯಲಾದ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-10 ರಿಂದ 15 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಸಅ**.** ರವರಿಂದ ಃ</u>

ಮೃತ ವ್ಯಕ್ತಿ ಚಲಾಯಿಸುತ್ತಿದ್ದ ವಾಹನದ ಸಂಖ್ಯೆ ಕೆಎ-66 ಕೆ-8675 ರ ಟಿ ವಿ ಎಸ್ ಎಕ್ಸ್‌ಎಲ್ ಆಗಿತ್ತು ಎಂದರೆ ಸರಿ. ಅಪಘಾತವಾದ ಸ್ಥಳವು ಅಜ್ಜಂಪುರ ರಸ್ತೆಯ ಎಸ್ ಹೆಚ್ 76 ರ ಹಳ್ಳಿ ಮೇಸ್ಟ್ರು ಅಡಿಕೆ ಗೋಡೌನ್ ಹತ್ತಿರ ಎಂದರೆ ಸರಿ. ಅಪಘಾತಪಡಿಸಿದ ವಾಹನದ ಸಂಖ್ಯೆ ಕೆಎ-32 ಹೆಚ್-3001 ನ ಮಹೇಂದ್ರ ಎಕ್ಸ್ ಯು ವಿ 500 ಆಗಿತ್ತು ಎಂದರೆ ಸರಿ. ಮಹಜರನ್ನು ದಿಃ 09.12.2024 ರಂದು ಜರುಗಿಸಿರುತ್ತಾರೆ ಎಂದರೆ ಸರಿ. ಸ್ಥಳ ಮಹಜರನ್ನು ನಾನು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಅಪಘಾತಕ್ಕೊಳಪಟ್ಟ ಮತ್ತು ಅಪಘಾತಪಡಿಸಿದ ವಾಹನದ ಅಮಾನತ್ತು ಮಹಜರನ್ನು ದಿಃ 09.12.2024 ರಂದು ಮಧ್ಯಾಹ್ನ 2.15 ರಿಂದ 3.15 ರವರೆಗೆ ನಿಪಿ-9 ರಂತೆ ಜರುಗಿಸಿರುತ್ತಾರೆ ಎಂದರೆ ಸರಿ.

<u>ಪಾಟೀಸವಾಲುಃ ಶ್ರೀ ಎನ್ ಎಸ್ ಆರೋಪಿ ಪರ ವಕೀಲರಿಂದಃ</u>

ಬೀರೂರಿನ ರೈಲ್ವೆ ಗೇಟ್ ಹತ್ತಿರ ನಮಗೆ ಸೇರಿದ ಜಮೀನು ಇರುತ್ತದೆ. ಮೃತ ವ್ಯಕ್ತಿಯು ಸದರಿ ಜಮೀನಿಗೆ ಹೋಗಿ ಬರುತ್ತೇನೆ ಎಂದು ಹೊರಟಿರುತ್ತಾರೆ. ಅವರು ಮನೆಯಿಂದ ಹೊರಡುವ ಸಮಯದಲ್ಲಿ ಹೆಲ್ಮೆಟ್ ಧರಿಸಿದ್ದರು. ಆ ಹೆಲ್ಮೆಟ್ ಅಪಘಾತದ ಸ್ಥಳದಲ್ಲಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ನಾನು ಯಾವುದೇ ಹೆಲ್ಮೆಟ್ ನೋಡಿರುವುದಿಲ್ಲ. ಅಪಘಾತವಾದ ಸ್ಥಳದ ಸಮೀಪ ಇದ್ದ ಅಡಿಕೆ ಮಂಡಿಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-2 ಮತ್ತು 3 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ ಅವರು ನಮ್ಮ ಊರಿನವರು. ನನ್ನ ಗಂಡನಿಗೆ ವಾಹನ ಚಲಾವಣೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಆಕೆಗೆ ನೀಡಿರುವ ಕಲಂ 133 ರ ನೋಟಿಸಿಗೆ ನೀಡಿರುವ ಉತ್ತರವನ್ನು ತೋರಿಸಿ ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ನೋಟಿಸಿನ 5 ನೇ ಕಾಲಂನಲ್ಲಿ ಸದರಿ ವಾಹನಕ್ಕೆ ವಿಮೆ ಇಲ್ಲಾ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಲಂ 133 ರ ನೋಟಿಸಿಗೆ ಉತ್ತರವನ್ನು ನಾನೇ ನೀಡಿರುತ್ತೇನೆ. ಮೃತ ವ್ಯಕ್ತಿಯ ಚಾಲನಾ

ಪರವಾನಗಿಯು ದಿಃ 01.12.2020 ರಂದು ಮುಕ್ತಾಯವಾಗಿರುತ್ತದೆ ಎಂದು ನಾನು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೃತ ವ್ಯಕ್ತಿಯ ವಾಹನ ಚಾಲನಾ ಪರವಾನಗಿ ಮತ್ತು ವಿಮೆಯನ್ನು ಪೋಲಿಸರಿಗೆ ನೀಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಗಂಡನ ವಾಹನ ಚಾಲನಾ ಪರವಾನಗಿ ಮತ್ತು ವಾಹನದ ವಿಮೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಅಪಘಾತ ವಿಮಾ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ನಾನು ನನ್ನ ಗಂಡನ ವಾಹನ ಚಾಲನಾ ಪರವಾನಗಿ ಮತ್ತು ವಾಹನದ ವಿಮೆಯನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಪರಿಹಾರ ಅರ್ಜಿಯನ್ನು ನಾನೇ ಸಲ್ಲಿಸಿರುತ್ತೇನೆ. ನನ್ನ ಗಂಡನಿಗೆ ವಾಹನ ಚಾಲನಾ ಪರವಾನಗಿ ಮತ್ತು ವಾಹನದ ವಿಮೆ ಇಲ್ಲದೆ ಇರುವ ಕಾರಣ ನಾನು ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವಾದ ನಂತರ ನನ್ನ ಗಂಡ ಚಲಾಯಿಸುತ್ತಿದ್ದ ವಾಹನವನ್ನು ನೋಡಿರುತ್ತೇನೆ. ಸದರಿ ವಾಹನದ ಹಿಂಭಾಗ ಪೂರ್ಣ ಜಖಂಗೊಂಡಿತ್ತು. ವಾಹನದ ಮುಂಭಾಗ ಏನೂ ಹಾನಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ದೋಷಾರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿದ ದ್ವಿ ಚಕ್ರ ವಾಹನದ ಛಾಯಾಚಿತ್ರವನ್ನು ತೋರಿಸಲಾಗಿ ಸದರಿ ವಾಹನದ ಮುಂಭಾಗ ಜಖಂಗೊಂಡಿರುವ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಟಿ ವಿ ಎಸ್ ವಾಹನದ ಎರಡೂ ಬದಿಗಳಿಗೆ ಹಾನಿಯಾಗಿತ್ತಾ ಎಂದರೆ ಸಾಕ್ಷಿ ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಕಾರು ಮರಕ್ಕೆ ಡಿಕ್ಕಿ ಹೊಡೆದು ಅದರ ಮುಂಭಾಗ ಜಖಂಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮಹಜರ್ ನಲ್ಲಿ ಏನು ಬರೆದಿರುತ್ತದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಕಾರಿನ ಮುಂಭಾಗ ಜಖಂಗೊಂಡಿರುತ್ತದೆ ಎಂದು ಬರೆದಿರುತ್ತಾರೆ. ಟಿ ವಿ ಎಸ್ ವಾಹನದ ಮುಂಭಾಗ ಜಖಂಗೊಂಡಿರುವ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಟಿ ವಿ ಎಸ್ ವಾಹನ ಈಗ ನಮ್ಮ ಮನೆ ಬಳಿ ನಿಂತಿದೆ. ಟಿ ವಿ ಎಸ್ ವಾಹನವನ್ನು ನನಗೆ ಹಸ್ತಾಂತರಿಸುವ ಪೂರ್ವದಲ್ಲಿ ಆರ್ ಟಿ ಓ ರವರಿಂದ ತನಿಖೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ ಟಿ ಓ ತನಿಖೆ ಸಮಯದಲ್ಲೂ ನನ್ನ ಗಂಡನ ವಾಹನ ಚಾಲನಾ ಪರವಾನಗಿ ಮತ್ತು ವಾಹನದ ವಿಮೆಯನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರ್ ಟಿ ಓ ರವರ ವರದಿಯಲ್ಲಿ ಟಿ ವಿ ಎಸ್ ವಾಹನದ ಮುಂಭಾಗ ಜಖಂಗೊಂಡಿರುವ ಬಗ್ಗೆ ವರದಿ ನೀಡಿರುತ್ತಾರೇ ಹೊರತು ಹಿಂಭಾಗ ಜಖಂಗೊಂಡಿರುವ ಬಗ್ಗೆ ವರದಿ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನೇ ಆರೋಪಿ ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಅಪಘಾತವನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಕಾರು ಇತ್ತೋ ಇಲ್ಲವೋ ಎಂದು ನಾನು ಗಮನಿಸಿರುವುದಿಲ್ಲ. ಅಪಘಾತದ ದಿನ ನನಗೆ ಯಾವುದೇ ಮಾಹಿತಿ ದೊರೆತಿಲ್ಲ ಎಂದರೆ ಸರಿ. ನನಗೆ ಅಪಘಾತವನ್ನು ನೋಡಿದ ವ್ಯಕ್ತಿಗಳು ಹೇಳಿರುವ ಬಗ್ಗೆ ಅಪಘಾತದ ಬಗ್ಗೆ ತಿಳಿಯಿತು.

ನಿಪಿ-1 ರ ದೂರನ್ನು ಪೋಲಿಸರೇ ಬರೆದಿರುತ್ತಾರೆ. ನಿಪಿ-1 ರ ದೂರಿಗೆ ಸಹಿ ಮಾಡುವಾಗ ನನ್ನ ಗಂಡನ ಮೃತ ದೇಹವು ಬೀರೂರು ಸರ್ಕಾರಿ ಆಸ್ಪತ್ರೆಯಲ್ಲಿತ್ತು. ನಿಪಿ-1 ರ ದೂರಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ನನ್ನ ಗಂಡನ ಮರಣದಿಂದ ಗಾಭರಿಗೊಂಡಿರುವ ಕಾರಣ ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ 3-4 ದಿನಗಳ ನಂತರ ಮಹಜರ್ ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ನನ್ನ ಸಮಕ್ಷಮ ಕಚ್ಚಾ ನಕ್ಷೆ ತಯಾರಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಪಘಾತವು ಅಜ್ಜಂಪುರ - ಬೀರೂರು ರಸ್ತೆಯ ಎಡಭಾಗದಲ್ಲಿ ಆಗಿರುತ್ತದೆ ಎಂದರೆ ಸರಿ. ಆರೋಪಿಯು ವಾಹನವನ್ನು ಅಜ್ಜಂಪುರ ರಸ್ತೆಯ ಎಡಭಾಗದಲ್ಲೇ ಚಲಾಯಿಸಿಕೊಂಡು ಬರುತ್ತಿರುವಾಗ ನನ್ನ ಗಂಡನೇ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನೇ ಆರೋಪಿ ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ ಆರೋಪಿಯ ನಿಯಂತ್ರಣ ತಪ್ಪಿ ವಾಹನವು ಮರಕ್ಕೆ ಡಿಕ್ಕಿಪಡಿಸಿ ವಾಹನದ ಮುಂಭಾಗ ಜಖಂಗೊಂಡಿರುತ್ತದೆ ಎಂದರೆ ಸರಿಯಲ್ಲ.

ಅಪಘಾತದ ಸ್ಥಳಕ್ಕೆ ನಾನು ಹೋದಾಗ ಅಲ್ಲಿ ಅಡಿಕೆ ಮಂಡಿಯಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ಜನ ಸೇರಿದ್ದರು. ಚಾಸಾ-2 ಮತ್ತು 3 ರವರು ಅಡಿಕೆ ಮಂಡಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ದೋಷಾರೋಪಣಾ ಪಟ್ಟಿಯಲ್ಲಿ ಅಡಿಕೆ ಮಂಡಿಯಲ್ಲಿ ಕೆಲಸ ಮಾಡುವವರನ್ನು ಸಾಕ್ಷಿಯಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ನನ್ನ ಗಂಡನ ವಾಹನಕ್ಕೆ ವಿಮೆ ಮತ್ತು ಆತನಿಗೆ ವಾಹನ ಚಾಲನಾ ಪರವಾನಗಿ ಇಲ್ಲದ ಕಾರಣ ಆರೋಪಿ ವಿರುದ್ಧ ಪರಿಹಾರ ಪಡೆಯಲು ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪೋಲಿಸರು ಬರೆದಿರುವ ಸುಳ್ಳು ದೂರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಬೇಕಾದ ವ್ಯಕ್ತಿಗಳನ್ನು ದೋಷಾರೋಪಣಾ ಪಟ್ಟಿಯಲ್ಲಿ ಸಾಕ್ಷಿದಾರರನ್ನಾಗಿ ತೋರಿಸಿ ಪರಿಹಾರ ಪಡೆಯಲು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಗಂಡನ ತಪ್ಪಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹಣೆ ಮತ್ತು ಮಂಡಿಗೆ ಏಟಾಗಿತ್ತು ಎಂದರೆ ಸರಿ. ನನ್ನ ಗಂಡ ಎದುರುಗಡೆ ಬರುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ ಕಾರಣ ಆ ರೀತಿ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಹೆಲ್ಮೆಟ್ ಧರಿಸದ ಕಾರಣ ಆ ರೀತಿ ಗಾಯವಾಗಿತ್ತು ಎಂದರೆ ಸರಿಯಲ್ಲ. ಹೆಲ್ಮೆಟ್ ಧರಿಸದೇ ಇದ್ದರೂ ಸಹ ನನ್ನ ಗಂಡ ಹೆಲ್ಮೆಟ್ ಧರಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳವು ರಾಜ್ಯ ಹೆದ್ದಾರಿಯಾದ ಕಾರಣ ಅಲ್ಲಿ ವಾಹನಗಳನ್ನು 60 ಕಿಮಿ ವೇಗದಲ್ಲಿ ವಾಹನ ಚಲಾಯಿಸಲು ಅನುಮತಿ ಇದೆ ಎಂದರೆ ಸಾಕ್ಷಿ ಅದಕ್ಕೂ ಹೆಚ್ಚಿನ ವೇಗದಲ್ಲಿ ಚಾಲನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ವಾಹನವನ್ನು ಜಾಗರೂಕತೆಯಿಂದ ಮತ್ತು ನಿದಾನವಾಗಿ ಚಲಾಯಿಸಿಕೊಂಡು ಬರುತ್ತಿರುವಾಗ ನನ್ನ ಗಂಡನೇ ಆರೋಪಿ ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ನನಗೆ ಓದಿ ತಿಳಿಸಿರುತ್ತಾರೆ. ಮಹಜರ್ ನಲ್ಲಿ

ಕಾರಿನ ಚಾಲಕ ವಿನುತ್ ಎಂದು ಬರೆಯಿಸಿರುತ್ತಾರೆ. ಮಹಜರನ್ನು ನಾನು ಓದಿ ಕೇಳಿ ತಿಳಿದುಕೊಂಡಿರುತ್ತೇನೆ. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-2 ರ ಮಹಜರ್ ನಲ್ಲಿ ಆರೋಪಿಯ ಹೆಸರು ನಮೂದು ಇಲ್ಲಾ ಎಂದರೆ ಸರಿಯಲ್ಲ. ಅಮಾನತ್ ಮಹಜರ್ ನಲ್ಲಿ ಆರೋಪಿಯ ಹೆಸರು ಇಲ್ಲಾ ಎಂದರೆ ಸರಿಯಲ್ಲ. ಆರೋಪಿಯ ಹೆಸರು ಬರೆದಿರುವ ಮಹಜರ್ ಬೇರೆಯೇ ಇದೆಯೇ ಎಂದರೆ ನನಗೆ ಗೊತ್ತಿಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು, ಕಡೂರು.